ದಿನಾಲು ನಾಗರಾಜನೇ ಅಡುಗೆ ಮಾಡುವುದು ಎಂದು ತಿಳಿಯಿತು. ಪಕ್ಕದ ಮನೆಯಲ್ಲಿ ಚೌಗಲೆ ಕಾಲೇಜಿನ ನಾಲ್ಕಾರು ಜನ ಬ್ಯಾಚಲರ್ ಲೆಕ್ಚರರ್ಸ್; ಅವರಲ್ಲಿದ್ದ ಕನ್ನಡದ ಕುಮಾರ ನಾಡಿಗ ಕುಟುಂಬದವರ ಜೊತೆಗೇ ಊಟ ತಿಂಡಿ ಮಾಡುತ್ತಿದ್ದರು.

ಎಲ್ಲರಿಗೂ ನೆಲದ ಮೇಲೆ ಹಾಸಿಗೆ. ವಿಪರೀತ ಸೆಕೆ ಇದ್ದರೂ ಮಲಗಿದೊಡನೆ ನಿದ್ದೆ. ಮರುದಿನ ಬೆಳಗ್ಗೆ ನಾಗರಾಜ ಸಿದ್ಧಪಡಿಸಿದ್ದ ತಿಂಡಿ. ಹತ್ತಿರದಲ್ಲೇ ಇದ್ದ ಚೌಗಲೆ ಕಾಲೇಜು, ನಾಡಿಗನ ಇಂಗ್ಲಿಷ್ ವಿಭಾಗ, ಇತರ ಕೊಠಡಿಗಳನ್ನು ನೋಡಿ ಬಂದೆವು. ಆ ನಂತರ ನಾಡಿಗನ ಸಲಹೆ ಪ್ರಕಾರ ಕುಮಾರ ನಮಗೆ ಗೋವೆ ತೋರಿಸಲು ಕರೆದುಕೊಂಡು ಹೊರಟರು. ಸುತ್ತಲೂ ಪೋರ್ಚುಗೀಸ್ ಕ್ರಿಶ್ಚಿಯನ್ ಕೊಂಕಣಿ ಸಂಸ್ಕೃತಿಯ ವಾಸ್ತುಶಿಲ್ಪ ವೈವಿಧ್ಯ.

ಸಂಜೆಯ ನಂತರದ ನಾಡಿಗ ಸಂಪೂರ್ಣ ಗೋವೆಯ ಪ್ರಜೆಯಾಗಿದ್ದ. ಗೋಡಂಬಿ ರಸ ನಾಡಿಗನ ಪ್ರೀತಿಯ ಪಾನವಾಗಿತ್ತು. ಆದರೆ, ಅದರಲ್ಲಿಯೂ ಮಿತಿ ಇರಿಸಿಕೊಂಡಿದ್ದ. ಕಾವ್ಯ, ಸಾಹಿತ್ಯ, ಇತರ ಲೇಖಕರು ಮುಂತಾದ್ದನ್ನು ಮೀರಿದ ಮಾತು, ಅವನ ವ್ಯಕ್ತಿತ್ವದ ಬೇರೆ ಮುಖಗಳು ನಮಗೆ ಕಂಡವು. ನಾಡಿಗ ಹಸ್ತರೇಖಾತಜ್ಞನೂ ಆಗಿದ್ದ. ಕೈ ನೋಡಿ ಗೆರೆಗಳನ್ನು ವಿಶ್ಲೇಷಿಸಿ, ನಮ್ಮ ಭವಿಷ್ಯ, ಸ್ವಭಾವ, ಬದುಕಿನ ಮುಂದಿನ ದಿನಗಳ ಆಗುಹೋಗುಗಳನ್ನು ಹೇಳುವಲ್ಲಿ ಪಾರಂಗತನಿದ್ದ. ಕೆಲವು ಸಂಗತಿಗಳನ್ನು ವಿವರಿಸುತ್ತ, ನಾವು ಎಲ್ಲಿ ಎಡವಬಹುದು, ಎಚ್ಚರಿಕೆ ವಹಿಸಬೇಕು ಎಂದೂ ಸೂಚಿಸುತ್ತಿದ್ದ. ಅಕ್ಕಪಕ್ಕದ ಜನರಿಗೆ, ಸಹೋದ್ಯೋಗಿಗಳಿಗೆ ಪುಕ್ಕಟೆಯಾಗಿ ಹೋಮಿಯೋಪತಿ ಔಷಧ ಕೊಡುತ್ತಿದ್ದ. ಇಂಗ್ಲಿಷ್, ಹರಕು ಮುರುಕು ಕೊಂಕಣಿಯಲ್ಲೂ ಮಾತನಾಡುತ್ತ ಎಂಥ ಕಾಯಿಲೆಗೂ ಚಿಕಿತ್ಸೆ ಸೂಚಿಸುವ/ ನೀಡುವ ವೈದ್ಯನಾಗಿದ್ದ. ಅವನ ಈ ಹವ್ಯಾಸಗಳು ಸೇವಾಭಾವನೆಯಿಂದಲೇ ನಡೆಯುತ್ತಿದ್ದುದರಿಂದ ಅಲ್ಲಿಯ ಜನರು ಅವನನ್ನು ಅತ್ಯಂತ ಪ್ರೀತಿ, ಗೌರವದಿಂದ ಕಾಣುತ್ತಿದ್ದರು.

* * *

ನಾಡಿಗ ಧಾರವಾಡಕ್ಕೆ ಬಂದಾಗಲೆಲ್ಲ ನನ್ನ ಮನೆಯಲ್ಲಿಯೇ ಉಳಿಯುತ್ತಿದ್ದ. ಅಡಿಗರು ಅವನ ಪ್ರೀತಿಯ ಕವಿ. ಅವರ ಅನೇಕ ಕವಿತೆಗಳನ್ನು ಉದಾಹರಿಸಿ ನನಗೆ ಬೋಧಿಸುತ್ತಿದ್ದ. ಕಬ್ಬಿಣದ ಕಡಲೆಯಂತಿದ್ದ ಅಡಿಗರ ಕವಿತೆಗಳನ್ನು ಸರಾಗವಾಗಿ ವಿವರಿಸುತ್ತಿದ್ದ. ಅನೇಕ ಕವಿತೆಗಳನ್ನು ಬಾಯಿಪಾಠ ಹೇಳುತ್ತಿದ್ದ. ಅವರ ಎಲ್ಲ ಕವಿತೆಗಳ ಚರಿತ್ರೆ, ಅರ್ಥ, ಅನ್ಯಾರ್ಥ ವಿವರಿಸುತ್ತಿದ್ದ. ಒಂದು ಸಲ ಅಡಿಗರ 'ಭೂಮಿಗೀತ'ವನ್ನು ಓದಿ, ಅರ್ಥ ತಿಳಿಹೇಳಿದ್ದ. ಅಂದೇ ನಾನು ಹೇಳಿದೆ, 'ಅಡಿಗರ ಸಂಪೂರ್ಣ ಕಾವ್ಯವನ್ನು ಇಷ್ಟು ತಿಳಿದಿರುವ ನೀನು, ಅವರ ಎಲ್ಲ ಕವಿತೆಗಳನ್ನು ವಿಶ್ಲೇಷಿಸಿ ಒಂದು ಪುಸ್ತಕ ಬರೆದುಬಿಡು. ನನ್ನಂಥ ಹೊಸಬರಿಗೆ ಅಡಿಗರನ್ನು ತಿಳಿಯಲು ನೆರವಾಗುತ್ತದೆ.'

'ಅದನ್ನು ಯಾರು ಪ್ರಕಟಿಸುತ್ತಾರೆ?' ಎಂದ. 'ನಾನೇ ಅದರ ಹೊಣೆ ಹೊರುತ್ತೇನೆ' ಅಂದೆ. ಮುಂದೆ ನಾಡಿಗ ಆಗಾಗ ಬರೆದು ಕೊಟ್ಟ ಎಲ್ಲ ಲೇಖನಗಳನ್ನು ಹೊಂದಿಸಿ, 'ಎಂ. ಗೋಪಾಲಕೃಷ್ಣ ಅಡಿಗ: ಒಂದು ಕಾವ್ಯಾಭ್ಯಾಸ' ಪುಸ್ತಕ 'ಸಂಕ್ರಮಣ' ಪ್ರಕಾಶನದಿಂದ ಪ್ರಕಟಿಸಿದೆ (1968). ಅಡಿಗರ ಕಾವ್ಯದ ಬಗ್ಗೆ ಕನ್ನಡದಲ್ಲಿ ಬಂದ ಮೊದಲ ವಿಮರ್ಶಾ ಕೃತಿ ಇದಾಗಿತ್ತು. ನಂತರ 'ಅಡಿಗರು ಮತ್ತು ನವ್ಯಕಾವ್ಯ' ಎಂಬ ಹೆಸರಿನಿಂದ ಪರಿಷ್ಕೃತಗೊಳ್ಳುತ್ತ, ಈ ಪುಸ್ತಕ ಹಲವು ಮುದ್ರಣಗಳನ್ನು ಕಂಡಿದೆ.

* * *

ಸಾಗರದ ಲಾಲ್‌ಬಹಾದ್ದೂರ್ ಕಾಲೇಜಿನಲ್ಲಿ ಅಡಿಗರು ಕವಿಗೋಷ್ಠಿ ಆಯೋಜಿಸಿದ್ದರು (1965 ಫೆಬ್ರುವರಿ 7). ನವ್ಯಕವಿಗಳನ್ನು ಒಂದೆಡೆ ಸೇರಿಸಿ, ಒಂದು ಕಾಲೇಜಿನವರು ಹೀಗೆ ಕವಿಗೋಷ್ಠಿ ಮಾಡಿದ್ದು ಅದು ಮೊದಲ ಸಲ ಆಗಿದ್ದಿರಬಹುದು. ನಾಡಿಗನಿಗೂ 'ಸಂಕ್ರಮಣ'ದ ನಮಗೂ ಆಮಂತ್ರಣವಿತ್ತು. ನಾಡಿಗ 5ರಂದು ಸಂಜೆಯೇ ನಮ್ಮ ಮನೆ ತಲುಪಿದ. 6ರಂದು ಹುಬ್ಬಳ್ಳಿಯಿಂದ ನಸುಕಿನ ಬಸ್ ಹಿಡಿದು ಹೊರಟೆವು. ದಾರಿಯುದ್ದಕ್ಕೂ ನಾಡಿಗನೇ ನಮ್ಮ ನಾಯಕ. ಅವನ ಮಾತು, ಹರಟೆ, ಜೋಕ್ಸ್ ಕೇಳುತ್ತ ನಮಗೆ ಕನ್ನಡ ಸಾಹಿತ್ಯ ಚರಿತ್ರೆಯ ಹಲವು ಮುಖಗಳು, ವ್ಯಕ್ತಿಗಳು, ಪ್ರಸಂಗಗಳು ತಿಳಿದದ್ದು ನಮ್ಮನ್ನು ಬೆಳೆಸಿತ್ತು.

ನಾಡಿಗ ಆರಂಭದ ದಿನಗಳಲ್ಲಿ (1948) ಹೈಸ್ಕೂಲ್ ಕಲಿತಿದ್ದು ಸಾಗರದಲ್ಲಿಯೇ. ಸಂಸ್ಥೆಯ ಮುಖ್ಯಸ್ಥರಾಗಿದ್ದ ಮಹಾಬಲೇಶ್ವರ ಭಟ್ಟರು, ಅಡಿಗರು ನಮಗಾಗಿ